CC-O. In Public Domain. Digitized by eGangotri

ನಂಬಿ

ಎಂ.ಎಸ್.ಎಸ್.ರಾವ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ನಿರಂಜನ

೧೯೬೭ ರ ಮೇ-ಜೂನ್ ತಿಂಗಳಲ್ಲಿ ಮೈಸೂರು ನಗರದಲ್ಲಿ ನಡೆದ
ವಯಸ್ಕರ ಶಿಕ್ಷಣ ಸಾಹಿತ್ಯ ರಚನಾಲಯದಲ್ಲಿ ರಚಿತವಾದುದು

ಎಂ. ಎಸ್. ಎಸ್. ರಾವ್

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

Sri Vidyabharathi Book Centre, Sringeri

ಪ್ರಥಮ ಮುದ್ರಣ 1967
ದ್ವಿತೀಯ ಮುದ್ರಣ 1988 ಪ್ರತಿಗಳು 6000
CC-0. In Public Domain. Digitized by eGangotri

ಬೆಲೆ : ರೂ. 2-50

ಮುದ್ರಕರು
ಶ್ರೀ ಸದ್ಗುರು ಪ್ರಿಂಟರ್ಸ್, ರಾಮಾನುಜ ರಸ್ತೆ, ಮೈಸೂರು-570004
Sri Vidyabharathi Book Centre, Shringeri

CC-O. In Public Domain. Digitized by eGangotri

ಮುನ್ನುಡಿ

ಅನಕ್ಷರಸ್ಥ ವಯಸ್ಕರು ಓದು ಬರಹ ಕಲಿತ ಮಾತ್ರಕ್ಕೆ ವಯಸ್ಕರ ಶಿಕ್ಷಣದ ಪ್ರಗತಿಯು ಸಾಧಿಸಿತು ಎಂದು ಲೆಕ್ಕಾಚಾರ ಹಾಕುವುದು ಸರಿಯಲ್ಲ. ಕಲಿತ ಓದನ್ನು ಯಾವ ಮಟ್ಟಕ್ಕೆ ಉಳಿಸಿಕೊಂಡಿದ್ದಾರೆ, ಉಳಿಸಿಕೊಳ್ಳಲು ಯಾವ ಬಗೆಯ ಪ್ರಯತ್ನ ಮಾಡುತ್ತಿದ್ದಾರೆ ಇತ್ಯಾದಿಯ ಬಗ್ಗೆ ವಯಸ್ಕರ ಶಿಕ್ಷಣ ರಂಗದ ಬಗ್ಗೆ ಆಸಕ್ತಿಯಿರುವ ಯಾರೇ ಆಗಲಿ ಇಂದು ಪ್ರಾಮಾಣಿಕವಾಗಿ ಚಿಂತಿಸಬೇಕಾದ, ಆ ದಿಕ್ಕಿನಲ್ಲಿ ಕೆಲಸಮಾಡಬೇಕಾದ ಅನಿವಾರ್ಯತೆ ಇಂದು ಇದೆ.

ಈ ಹಿನ್ನೆಲೆಯಲ್ಲಿ ವಯಸ್ಕರು ಕಲಿತ ಓದನ್ನು ಉಳಿಸಿಕೊಳ್ಳಲು ಓದಿನ ಮೂಲಕ ಅರಿವುಮೂಡಿ ಆತನ ಬದುಕು ಪ್ರಗತಿಯ ಕ್ರಿಯಾಶೀಲತೆಯತ್ತ ನಡೆಯಲು ಸಹಾಯಕವಾಗುವಂತೆ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಹೊರತಂದಿರುವ ವಯಸ್ಕರಿಗೆ ಉಪಯುಕ್ತವಾದ ಅವರ ಆಸಕ್ತಿ ಅಭಿರುಚಿಗೆ ಅನುಗುಣವಾಗಿ ಓದಲು ಸುಲಭವಾದ ಅನುಭವಿ ಲೇಖಕರು ಬರೆದಿರುವ ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳಲ್ಲಿ ಈ ಕೃತಿಯೂ ಒಂದು.

ಈಗಾಗಲೇ ಹೊರಬಂದಿರುವ ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳೆಂದೇ ಜನಪ್ರಿಯವಾಗಿರುವ, ಓದುಗರಿಂದ, ಸಾಹಿತ್ಯಾಸಕ್ತರಿಂದ ನಾಡಿನಾದ್ಯಂತ ಮೆಚ್ಚುಗೆ ಪಡೆದಿರುವ ಈ ಮಾಲಿಕೆಯ ಪುಸ್ತಕಗಳಲ್ಲಿ ಒಂದು ನೂರು ಕೃತಿಗಳ ಪುನರ್‌ಮುದ್ರಣ ಕೈಗೊಳ್ಳಲಾಗಿದೆ. ಈ ಕೃತಿಗಳು ನಮ್ಮ ಉದ್ದೇಶದ ಈಡೇರಿಕೆಯಲ್ಲಿ ಸಫಲವಾಗಬಲ್ಲವು ಎಂಬ ಆಶಯ ನಮ್ಮದು.

ಪ್ರಕಟಣಾ ಕಾರ್ಯದಲ್ಲಿ ಸಹಕರಿಸಿದ ಎಲ್ಲರಿಗೂ ನನ್ನ ವಂದನೆಗಳು.

15–11–88

ದೇವನೂರು ಶಿವಮಲ್ಲು
ಅಧ್ಯಕ್ಷರು
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊಸದಾಗಿ ಅಕ್ಷರಸ್ಥರಾದ ವಯಸ್ಕರಿಗೆ ಓದಲು ಸರಳವಾದ ಮತ್ತು ಸ್ವಾರಸ್ಯವಾದ ಸಾಹಿತ್ಯವನ್ನು ಒದಗಿಸುವುದು ವಯಸ್ಕರಿಗೆ ಓದು ಬರಹ ಕಲಿಸುವುದಕ್ಕಿಂತ ಮುಖ್ಯವಾದುದು. ಇಲ್ಲದಿದ್ದರೆ ವಯಸ್ಕರು ಮತ್ತೆ ಅನಕ್ಷರಸ್ಥರಾಗಿ ಬಿಡುತ್ತಾರೆ. ಹಾಗೆ ಆಗದಂತೆ ಮಾಡಲು ವಯಸ್ಕರ ಶಿಕ್ಷಣ ಸಮಿತಿ ವಯಸ್ಕರಿಗೆ ಸೂಕ್ತವಾದ ಸಾಹಿತ್ಯವನ್ನು ರಚಿಸುವ ವ್ಯವಸ್ಥೆಯನು ಮಾಡುತ್ತಿದೆ.

ವಯಸ್ಕರ ಮನೋಭಾವ, ಆಸಕ್ತಿ, ಮತ್ತು ಅಭಿರುಚಿ, ವಾಚ್ಯಶಕ್ತಿ, ಶಬ್ದ ಸಂಪತ್ತು–ಇವುಗಳನ್ನು ಗಮನದಲ್ಲಿಟ್ಟುಕೊಂಡು ಸಾಹಿತ್ಯವನ್ನು ರಚಿಸುವುದು ಸುಲಭವಲ್ಲ. ಈ ಕಲೆ ಒಂದು ಶಾಸ್ತ್ರವಾಗಿಯೇ ಬೆಳೆದಿದೆ, ಬೆಳೆಯುತ್ತಿದೆ. ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳಲ್ಲಿ ಇದರ ಬಗ್ಗೆ ವಿಶೇಷವಾಗಿ ಸಂಶೋಧನೆ, ಅಧ್ಯಯನಗಳು ನಡೆದಿವೆ, ನಡೆಯುತ್ತಿವೆ. ಇವುಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ಕನ್ನಡದಲ್ಲಿ ಶಾಸ್ತ್ರೀಯವಾಗಿ ಸಾಹಿತ್ಯವನ್ನು ರಚಿಸಬೇಕು.

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ರಾಜ್ಯ ಸರಕಾರದ ಶಿಕ್ಷಣ ಇಲಾಖೆಯ ನೆರವಿನೊಡನೆ ಈ ಕಾರ್ಯದಲ್ಲಿ ತೊಡಗಿದೆ. ಲೇಖಕರಿಗೆ ಈ ಬಗ್ಗೆ ಮುಖ್ಯವಾದ ಅಂಶಗಳನ್ನು ತಿಳಿಸುವ ಉದ್ದೇಶದಿಂದ ಸಾಹಿತ್ಯ ರಚನಾಲಯಗಳನ್ನು ಏರ್ಪಡಿಸುತ್ತಿದೆ.

ಮೈಸೂರು ನಗರದಲ್ಲಿ 1967 ರ ಮೇ 10 ರಿಂದ ಜೂನ್ 8 ರವರೆಗೆ ಅಂಥ ಒಂದು ಸಾಹಿತ್ಯ ರಚನಾಲಯ ಏರ್ಪಾಡಾಗಿತ್ತು. ಇಪ್ಪತ್ತೊಂದು ಮಂದಿ ಲೇಖಕರು ಈ ರಚನಾಲಯದಲ್ಲಿ ಭಾಗವಹಿಸಿದ್ದರು.

ಅವರು ಹೊಸದಾಗಿ ಓದು ಬರಹ ಕಲಿತ ವಯಸ್ಕರಿಗೆ ಶಾಸ್ತ್ರೀಯವಾಗಿ ಹಂತ ಹಂತವಾಗಿ ಕಾರ್ಡು, ಮಡಿಕೆ ಮತ್ತು ಪುಸ್ತಿಕೆಗಳ ರೂಪದಲ್ಲಿ ಸಾಹಿತ್ಯವನ್ನು ರಚಿಸಿದರು.

ಆ ಸಾಹಿತ್ಯ ರಚನಾಲಯದಲ್ಲಿ ತಯಾರಾದ ಪುಸ್ತಿಕೆಗಳಲ್ಲಿ ಇದು ಒಂದು. ಇದನ್ನು ತಮ್ಮ ಕೈಯಲ್ಲಿಡಲು ಸಂತೋಷಿಸುತ್ತೇನೆ.

ಎಂ. ಮಲ್ಲಿಕಾರ್ಜುನಸ್ವಾಮಿ
ಅಧ್ಯಕ್ಷ
ವಯಸ್ಕರ ಶಿಕ್ಷಣ ಸಮಿತಿ

ಮೈಸೂರು
15-11-1967

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಂಬೆ

ಅಂದು ವನಮಹೋತ್ಸವ. ಊರಿನ ಜನರು ಒಂದೆಡೆ ಸೇರಿದ್ದರು. ಗ್ರಾಮ ಸೇವಕರು ಅನೇಕ ಸಸಿಗಳನ್ನು ತಂದಿದ್ದರು. ಹಣ್ಣಿನ ಸಸಿಗಳೂ ಇದ್ದವು. ಸಹಕಾರ ಸಂಘದ ಮುಖಾಂತರ ಅವುಗಳ ಮಾರಾಟ ನಡೆದಿತ್ತು. ರೈತರು ನಾ ಮುಂದೆ ನೀ ಮುಂದೆ ಎಂದು ಸಸಿಗಳನ್ನು ಕೊಳ್ಳುತ್ತಿದ್ದರು.

ರಂಗನು ಮಾವಿನ ಸಸಿಗಳನ್ನು ಕೊಂಡುಕೊಂಡ. ಭೀಮ, ಮಾದ, ಕುಶಾಲಪ್ಪ ಇವರೂ ತಮಗೆ ಬೇಕಾದ ಸಸಿಗಳನ್ನು ಕೊಂಡರು.

ರಂಗನು ಮಾವಿನ ಸಸಿ ತೆಗೆದುಕೊಂಡು ಮನೆಗೆ ಬಂದ. ಅವನ ಹೆಂಡತಿ ಸಿದ್ದಮ್ಮ ಒಳಗೆ ಇದ್ದಳು. ಅವಳು 'ಮಾವಿನ ಸಸಿ ಇರಲಿ. ನಿಂಬೆ ಸಸಿಗಳನ್ನು ತರಬಾರದೇ ?' ಎಂದಳು. ರಂಗನಿಗೆ ಹೆಂಡತಿಯ ವಿಚಾರ ಮನಸ್ಸಿಗೆ ಬಂತು. 'ಈಗಲೇ ಹೋಗಿ ತರುವೆನು' ಎಂದು ಹೇಳಿದನು.

ರಂಗ ಸಹಕಾರಿ ಸಂಘದ ಕಚೇರಿಗೆ ಹೋದ. ಭೀಮ, ಮಾದ, ಕುಶಾಲಪ್ಪ ಅಲ್ಲಿಯೇ ಇದ್ದರು.

ಭೀಮ ಕೇಳಿದ : ಏಕೆ ರಂಗಪ್ಪ ಮತ್ತೆ ಬಂದೆ ?

ರಂಗಪ್ಪ ಹೇಳಿದ : ನೋಡು ಭೀಮಣ್ಣ ನಿಂಬೆ ಸಸಿ ಬೇಕಾಗಿವೆ. ಅದರ ಉಪಯೋಗ ಈಗ ಬಹಳವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾದ : ಹೌದು, ನಿಂಬೆ ಬಡವರ ಬಂಧು. ಇದು ಹಲವು ಆಹಾರಗಳಿಗೆ ಮಸಾಲೆ. ಅದರಿಂದ ಪಾನಕ ಮಾಡಬಹುದು. ಉಪ್ಪಿನಕಾಯಿ ಹಾಕಬಹುದು. ಗೊಜ್ಜು ಮಾಡಬಹುದು. ಇಷ್ಟೇ ಅಲ್ಲ, ಕೆಲ ಔಷಧಿಗೆ ನಿಂಬೆಯನ್ನು ಉಪಯೋಗಿಸುವರು.



Sri Vidyabharathi Book Centre, Sringeri

CC-O. In Public Domain. Digitized by eGangotri

ಕುಶಾಲಪ್ಪ : ಅಷ್ಟೇ ಅಲ್ಲ, ಇತ್ತೀಚೆಗೆ ನಿಂಬೆ ರಸ ದಿಂದ ಅನೇಕ ಬಗೆಯ ರಾಸಾಯನಿಕ ದ್ರವ್ಯಗಳೂ, ಸೌಂದರ್ಯವನ್ನು ಹೆಚ್ಚು ಮಾಡುವ ಸಾಮಗ್ರಿಗಳೂ ತಯಾರಾಗುತ್ತವೆ. ಈ ಹಿಂದೆ ನಾನು ಓದಿದ್ದೆ. ಬೆಂಗಳೂರಿ ನಲ್ಲಿ ವಸ್ತುಪ್ರದರ್ಶನಕ್ಕೆ ಹೋದಾಗ ಅವನ್ನೆಲ್ಲ ಅಲ್ಲಿ ನೋಡಿದೆ. ಅದೇನು ಬಣ್ಣ ಬಣ್ಣದ ಬರಣಿಗಳು ನೋಡು ವುದಕ್ಕೆ ಎರಡು ಕಣ್ಣೂ ಸಾಲವು.

ರಂಗ : ಅದೆಲ್ಲ ಇರಲಿ, ನಮಗೆ ಮನೆಗೆ ಬೇಕಾ ದಷ್ಟು ವರ್ಷಕಾಲ ನಿಂಬೆಹಣ್ಣು ದೊರೆತರೆ ಸಾಕಪ್ಪ ! ಉಳಿದದ್ದು ತೆಗೆದುಕೊಂಡು ನಾವೇನು ಮಾಡಬೇಕು.

ಗ್ರಾಮಸೇವಕನು ವ್ಯವಹಾರದಲ್ಲಿ ತೊಡಗಿದ್ದ. ಈಗ ಅವನ ಮನಸ್ಸು ರಂಗನ ಮಾತಿನತ್ತ ತಿರುಗಿತು.

ಗ್ರಾಮಸೇವಕ ಹೇಳಿದ : ಅಲ್ಲೋ ರಂಗಪ್ಪ ನೀನು ಬರೀ ನಿನ್ನ ಮನೆಯನ್ನು ನೋಡಿಕೊಂಡರೆ ಸಾಲದು. ನೆರೆ ಹೊರೆಯವರಿಗೂ ನಿನ್ನಿಂದ ಸ್ವಲ್ಪ ಉಪಕಾರವಾಗಲಿ. ಹೇಗೂ ನಿನಗೆ ಹೊಲದಲ್ಲಿ ಸಾಕಷ್ಟು ಜಾಗ ಇದೆ. ಅದರ ಲ್ಲಿಯೇ ಸ್ವಲ್ಪ ಭಾಗದಲ್ಲಿ ನೂರು ಇನ್ನೂರು ಗಿಡಗಳ ನ್ನಾದರೂ ನೆಡು. ಸ್ವಲ್ಪ ಕಷ್ಟಪಟ್ಟರೆ ನಿನಗೂ ಲಾಭ, ಬೇರೆಯವರಿಗೂ ಲಾಭ ಮತ್ತು ಉಪಕಾರ. ನಿನ್ನಂಥ ವನೇ ಹೀಗೆ ನನ್ನ ಮನೆ, ನನ್ನ ಹೊಲ ಅಂತ ಅಂದರೆ ಉಳಿದವರ ಗತಿ ಏನು ?

ರಂಗಪ್ಪ : ಅದಿರಲಿ ಸ್ವಾಮಿ ನಿಂಬೆಯ ವ್ಯವ ಸಾಯಕ್ಕೆ ಭೂಮಿ ಹವೆ ಎಲ್ಲ ಹೇಗೆ ಇರಬೇಕು ? ನಾನು

Sri Vidyabharathi Book Centre, Sringeri

CC-O. In Public Domain. Digitized by eGangotri

ನನ್ನ ಹೊಲದಲ್ಲಿ ನಿಂಬೆ ಹಾಕಿದರೆ ಚೆನ್ನಾಗಿ ಬೆಳೆಯ ಬಹುದೇ ಹೇಳಿ ?

ಗ್ರಾಮಸೇವಕ : ಹೇಳುತ್ತೇನೆ, ನಿಂತ ಕಾಲ ಮೇಲೆ ಅವಸರದಲ್ಲಿ ಅದನ್ನೆಲ್ಲ ಹೇಳುವದು ಹೇಗೆ ? ಈ ಕಡೆ ಬಾ. ಮಾದ, ಗೋವಿಂದ, ಕುಶಾಲಪ್ಪ ಅವರನ್ನು ಈ ಕಡೆ ಕರೆ.

ಎಲ್ಲರೂ ಗ್ರಾಮಸೇವಕನ ಹತ್ತಿರ ಹೋದರು.

ಗ್ರಾಮಸೇವಕ : ನೋಡಿ, ಈಗ ಮೈಸೂರು ರಾಜ್ಯ ದಲ್ಲಿ ಸುಮಾರು ೨೫,೦೦೦ ಎಕರೆ ಪ್ರದೇಶದಲ್ಲಿ ಈ ನಿಂಬೆಯ ವ್ಯವಸಾಯ ನಡೆಯುತ್ತಿದೆ.

ಇದಕ್ಕೆ ಸ್ವಲ್ಪ ಉಷ್ಣತೆ ಮತ್ತು ನೀರಿನ ಅನುಕೂಲ ಇದ್ದರೆ ಸಾಕು. ಹೂ, ಕಾಯಿ ಬಿಟ್ಟಾಗ ಬಿರುಗಾಳಿ ಬೀಸ ಕೂಡದು. ಏಕೆಂದರೆ ಆಗ ಹೂವು, ಕಾಯಿ, ಹಣ್ಣುಗಳೆಲ್ಲ ಉದುರುತ್ತವೆ. ಈ ನಿಂಬೆಯ ವ್ಯವಸಾಯಕ್ಕೆ ಮಳೆಯನ್ನೇ ಕಾದು ಕೂಡಬೇಕಾಗಿಲ್ಲ. ಮಳೆ ಸರಾಸರಿ ೩೦ ಅಂಗುಲ ಇದ್ದರೆ ಸಾಕು. ೫೦ ಅಂಗುಲಕ್ಕಿಂತ ಹೆಚ್ಚಾದರೆ ಗಿಡಕ್ಕೆ 'ತ್ಯಾಂತರ' ಎಂಬ ರೋಗ ತಗಲಬಹುದು. ಅಂತಹ ರೋಗ ಗಳಿಂದ ಗಿಡಗಳು ಸಾಯುತ್ತವೆ.

ರಂಗಪ್ಪ : ಅದು ಸರಿ ಸ್ವಾಮಿ! ಈ ವ್ಯವಸಾಯಕ್ಕೆ ಭೂಮಿ ಹೇಗಿರಬೇಕು ಹೇಳಿ ?

ಗ್ರಾಮಸೇವಕ : ಓಹೋ ! ಸ್ವಲ್ಪ ಸಮಾಧಾನ. ಕೇಳು ಹೇಳುತ್ತೇನೆ. ನಿಂಬೆಗೆ ಇಂತಹ ಮಣ್ಣೇ ಇರಬೇಕು ಎಂಬ ನಿಯಮ ಇಲ್ಲ. ಮರಳು ಮಿಶ್ರ ಮಣ್ಣು ಇದ್ದರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಕೂಲ. ಭೂಮಿ ಫಲವತ್ತಾಗಿರಬೇಕು.

ಮಾದ : ಅದಕ್ಕೇನು ಸ್ವಾಮಿ, ಕಾಲಕಾಲಕ್ಕೆ ಸಾಕಷ್ಟು ಗೊಬ್ಬರ ಹಾಕಿದರೆ ಯಾವ ಭೂಮಿ ತಾನೆ ಫಲವತ್ತಾಗುವುದಿಲ್ಲ ?

ಗ್ರಾಮಸೇವಕ : ಹೌದು ಮಾದ, ನೀನು ಹೇಳುವದು ಸರಿ. ಆದರೆ ತೀರ ಜವಗು ಪ್ರದೇಶದಲ್ಲಿ ಇಲ್ಲವೆ ನಿಂತ ನೀರಿನ ಬದಿಯಲ್ಲಿ ಬೇಸಾಯ ಕಷ್ಟ ಅಲ್ಲವೆ ?

ಕುಶಾಲಪ್ಪ : ಅದೆಲ್ಲ ಆಯಿತು ಸ್ವಾಮಿ, ನಿಂಬೆಯಲ್ಲಿ ಬೇರೆ ಬೇರೆ ಜಾತಿ ಏನಾದರೂ ಇವೆಯೇ ? ಇದ್ದರೆ ಅವುಗಳಲ್ಲಿ ಬೇಗ ಫಲ ಕೊಡುವಂತಹ ಜಾತಿ ಯಾವುದು ಹೇಳಿ ಸ್ವಾಮಿ !

ಗ್ರಾಮಸೇವಕ : ನೋಡು ಕುಶಾಲಪ್ಪ ! ಅದನ್ನೇ ನಾನು ಈಗ ಹೇಳಲು ಹೊರಟಿದ್ದೆ. ನಿಂಬೆಯಲ್ಲಿ ಅನೇಕ ಜಾತಿ. ಸಿಹಿ, ಹುಳಿ, ನಾಟಿ ಮತ್ತು ಕಸಿ ಎಂಬ ಜಾತಿಗಳು ಉಂಟು.

ಸಾಮಾನ್ಯವಾಗಿ ನಿಂಬೇಗಿಡ ಸ್ವಲ್ಪ ಎತ್ತರವಾಗಿ ಪೊದೆಯಾಗಿ ಬೆಳೆಯುತ್ತದೆ. ಕೆಲವು ಹಣ್ಣುಗಳು ದುಂಡಾಗಿರುತ್ತವೆ. ಕೆಲವು ಸ್ವಲ್ಪ ಉದ್ದ ಮಾಟವಾಗಿರುತ್ತವೆ. ಇವುಗಳಿಗೆ ಗಜನಿಂಬೆ ಎಂದು ಹೇಳುತ್ತಾರೆ.

ಕೆಲವು ಹಣ್ಣುಗಳಲ್ಲಿ ಬೀಜ ಹೆಚ್ಚಾಗಿ ಇರುತ್ತವೆ. ಕೆಲವು ಹಣ್ಣುಗಳಲ್ಲಿ ಬೀಜಗಳು ಕಡಿಮೆ. ಕೆಲವಕ್ಕೆ ಹಣ್ಣಿನ ಸಿಪ್ಪೆ ದಪ್ಪ. ಕೆಲವಕ್ಕೆ ಸಿಪ್ಪೆ ತೆಳುವು. ಕೆಲವು ಹಣ್ಣುಗಳನ್ನು ಹಸಿರಾಗಿಯೇ ಬಳಸಬಹುದು. ಕೆಲವು

Sri Vidyabharathi Book Centre, Sringeri

 CC-O. In Public Domain. Digitized by eGangotri

ಹಣ್ಣುಗಳನ್ನು ಹಳದಿ ಬಣ್ಣಕ್ಕೆ ತಿರುಗಿದಾಗ ಬಳಸುವದು ಒಳ್ಳೇದು. ಆಗ ರಸವೂ ಹೆಚ್ಚು. ಪಾಸನೆಯೂ ಮಧುರ. ಕೆಲವು ಸಿಹಿ ಹಣ್ಣುಗಳಲ್ಲಿ ಕಿತ್ತಳೆ ಹಣ್ಣಿನ ಹಾಗೆ ಸಿಪ್ಪೆ



ಎತ್ತರವಾಗಿ ಬೆಳೆದಿರುವ ನಿಂಬೆಗಿಡ

ಸುಲಿದು ತಿರುಳನ್ನು ಉಪಯೋಗಿಸಬಹುದು. ಇದಕ್ಕೆ ಇಟಾಲಿಯನ್ ನಿಂಬೆ ಅಂತಲೂ ಕರೆಯುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದೇ ರೀತಿ ಇನ್ನೂ ಅನೇಕ ಬಗೆಯ ಜಾತಿಗಳು ಇವೆ. ಅವುಗಳಿಗೆಲ್ಲಾ ಒಂದೊಂದು ಹೆಸರೂ ಇದೆ.



ಸಿಪ್ಪೆ ದಪ್ಪವಾಗಿರುವ ಜಾತಿಯ ನಿಂಬೆ

ತಾಗಜಿ ನಿಂಬೆ, ರಂಗಪೂರ ನಿಂಬೆ, ಗಲಗಲ ನಿಂಬೆ, ಇತ್ಯಾದಿ.

ಮಾದ : ಅದಿರಲಿ ಬಿಡಿ ಸ್ವಾಮಿ ! ಹೆಸರಿನಲ್ಲಿ ಏನಿದೆ ? ಅದನ್ನೆಲ್ಲ ತಗೊಂಡು ನಾವೇನು ಮಾಡಬೇಕು ? ನಮಗೆ ಬೇಕಾದದ್ದು ಯಾವಾಗಲೂ ಹೆಚ್ಚು ಫಲ ಕೊಡುವ ಗಿಡ.

ಭೀಮ : ಅದು ಸರಿ ಮಾದಪ್ಪ (ಗ್ರಾಮ ಸೇವಕರ ಕಡೆಗೆ ಹೊರಳಿ)

"ಸ್ವಾಮಿ ನಿಂಬೆಯ ವ್ಯವಸಾಯ ಮಾಡುವದು ಹೇಗೆ ? ಸ್ವಲ್ಪ ತಿಳಿಸಿ."

Sri Vidyabharathi Book Centre, Sringeri

 CC-O. In Public Domain. Digitized by eGangotri

ಗ್ರಾಮಸೇವಕ : ನೋಡು ಭೀಮ ಬೀಜಗಳಿಂದಲೇ ನಿಂಬೆ ಸಸಿ ಮಾಡುವದು ರೂಢಿ. ಒಟ್ಟಲು ಹಾಕಲು ಮೊದಲು ಒಂದು ಜಾಗ ಆರಿಸಬೇಕು. ಆ ಭೂಮಿಯೆನ್ನು ಹದಗೊಳಿಸಿ ಒಟ್ಟಲು ಮಡಿ ಮಾಡಬೇಕು. ಮಡಿಯಲ್ಲಿ ಮಣ್ಣು ಹುಡಿಯಾಗಿರಬೇಕು. ಸಾಕಷ್ಟು ಎಲೆ ಅಥವಾ ಸಗಣಿ ಗೊಬ್ಬರವನ್ನು ಬೆರೆಸಬೇಕು. ಒಟ್ಟಲಿನಲ್ಲಿ ದಿಂಡುಗಳನ್ನು ಕಟ್ಟಬೇಕು. ಆ ದಿಂಡುಗಳ ಮೇಲೆ ಬೀಜಗಳನ್ನು ಸಾಲಾಗಿ ಊರಬೇಕು. ಬೀಜದಿಂದ ಬೀಜಕ್ಕೆ ಸುಮಾರು ಎರಡು ಮೂರು ಅಂಗುಲ ಅಂತರ ಇರಬೇಕು. ಒಟ್ಟಲು ಹಾಕಲು ಮೇ ಜೂನ್ ಇಲ್ಲವೆ ಸೆಪ್ಟೆಂಬರ್ ಅಕ್ಟೋಬರ್ ತಿಂಗಳು ಉತ್ತಮ.

ದಿಂಡುಗಳ ನಡುವೆ ಇರುವ ಕಾಲುವೆಗಳಲ್ಲಿ ದಿನ ಬಿಟ್ಟು ದಿನ ನೀರು ಹಾಯಿಸಬೇಕು. ಕೆಲವು ವಾರಗಳಲ್ಲಿ ಬೀಜ ಮೊಳೆತು ಸಸಿ ಮೇಲೆ ಬರುತ್ತವೆ.

ಮುಂದೆ ಕೆಲವು ತಿಂಗಳಲ್ಲಿ ಸಸಿ ನಾಲ್ಕರಿಂದ ಆರು ಅಂಗುಲ ಎತ್ತರ ಬೆಳೆಯುತ್ತದೆ.

ಗೋವಿಂದಯ್ಯ : ಇದೇನು ಸ್ವಾಮಿ ಹೀಗೆ ಹೇಳುತ್ತೀರ. ಎರಡು ಮೂರು ಅಂಗುಲ ಅಂತರ ಬಿಟ್ಟರೆ ಸಸಿ ಬೆಳೆದು ದೊಡ್ಡ ಗಿಡ ಆದೀತೇ ?

ಗ್ರಾಮಸೇವಕ : ಅಲ್ಲಾ ಗೋವಿಂದಯ್ಯ ಇದು ಒಟ್ಟಲು ಹಾಕುವ ಪದ್ಧತಿ ಅಷ್ಟೆ ! ನಾಲ್ಕಾರು ಅಂಗುಲ ಎತ್ತರ ಬೆಳೆದ ಈ ಸಸಿಗಳನ್ನು ಮುಂದೆ ಕಿತ್ತು ಬೇರೆ ಜಾಗಕ್ಕೆ ಬದಲಾಯಿಸಬೇಕು. ಆ ಬೇರೆ ಜಾಗವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಂಚೆಯೇ ಅಗೆದು ಹದ ಮಾಡಿರಬೇಕು. ಗೊಬ್ಬರ ಹಾಕಿ ಸಾಲು ಮಾಡಬೇಕು. ಆ ಸಾಲಿನಲ್ಲಿ ಸಸಿಗಳನ್ನು ನೆಡಬೇಕು. ಸಸಿಯಿಂದ ಸಸಿಗೆ ಎಂಟು ಒಂಬತ್ತು ಅಂಗುಲ ದೂರ ಇರಬೇಕು. ಸಾಲಿನಿಂದ ಸಾಲಿಗೆ ಸುಮಾರು ಎರಡು ಅಡಿ ಬಿಡಬೇಕು. ಈ ಹೊಸ ಮಡಿಯಲ್ಲಿ ಸಸಿಗಳನ್ನು ಸುಮಾರು ಒಂದು ವರ್ಷ ಬೆಳೆಸಬೇಕು. ಆಗ ಮೇಲಿಂದ ಮೇಲೆ ಗೊಬ್ಬರ ಹಾಕುವುದು ಆವಶ್ಯಕ.

ದಿನ ಬಿಟ್ಟು ದಿನ ನೀರು ಹಾಯಿಸಬೇಕು. ಕಳೆ ಕೀಳುವುದು ಮುಂತಾದ ಕೆಲಸಗಳನ್ನು ಮಾಡುತ್ತ ಇರಬೇಕು.

ಆಮೇಲೆ ಈ ಗಿಡಗಳನ್ನು ಕಾಯಂ ಜಾಗಕ್ಕೆ ಬದಲಾಯಿಸಬೇಕು.

ಕುಶಾಲಪ್ಪ : ಹೌದು ಸ್ವಾಮಿ ! ನನ್ನ ಅಳಿಯನು ಸಹ ಹೀಗೆಯೇ ಮಾಡಿದ್ದ. ಆದರೆ ಒಂದೊಂದು ಬೀಜದಿಂದಲೂ ಐದು ಆರು ಸಸಿಗಳು ಹೊರಟಿತಲ್ಲ ! ಅವುಗಳನ್ನೆಲ್ಲ ಒಟ್ಟಾಗಿ ಬದಲಾಯಿಸಬೇಕೋ ಹೇಗೆ ?

ಗ್ರಾಮಸೇವಕ : ಇಲ್ಲ. ನಿಂಬೆಗಿಡದಲ್ಲಿ ಒಂದು ವಿಚಿತ್ರ ಇದೆ. ಬೀಜ ಮೊಳೆತಾಗ ಒಂದೇ ಬೀಜದಿಂದ ನಾಲ್ಕು ಆರು ಸಸಿಗಳು ಹುಟ್ಟುತ್ತವೆ. ಅವುಗಳಲ್ಲಿ ಚೆನ್ನಾಗಿ ಬೆಳೆದ ಒಂದೋ ಎರಡೋ ಸಸಿಗಳನ್ನು ಇಟ್ಟುಕೊಳ್ಳಬೇಕು. ಉಳಿದ ಕಳಪೆ ಸಸಿಗಳನ್ನು ಕಿತ್ತುಹಾಕಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಗೋವಿಂದಯ್ಯ : ಸರಿ ಸ್ವಾಮಿ ! ಈಗ ಮುಂದೆ ಖಾಯಂ ಜಾಗದಲ್ಲಿ ಈ ಗಿಡಗಳನ್ನು ಹಾಕುವದು ಹೇಗೆ ?

ಗ್ರಾಮಸೇವಕ : ನೋಡು ಗೋವಿಂದಯ್ಯ ಗಿಡ ದೊಡ್ಡದಾದಾಗ ಅದಕ್ಕೆ ಹತ್ತು ಹದಿನೈದು ಅಡಿ ಜಾಗ ಬೇಕು. ಆದ್ದರಿಂದ ಗಿಡದಿಂದ ಗಿಡಕ್ಕೆ ಕನಿಷ್ಠ ಹದಿನೈದು ಇಪ್ಪತ್ತು ಅಡಿಗಳಾದರೂ ಬಿಡುವದು ಒಳ್ಳೇದು. ಹಾಗೆ ಮಾಡಿದರೆ ಒಂದರ ನೆರಳು ಇನ್ನೊಂದಕ್ಕೆ ಬೀಳುವದಿಲ್ಲ. ಬೇರಿಗೂ ಸಾಕಷ್ಟು ಜಾಗ ದೊರೆಯುತ್ತದೆ.

ಅವುಗಳನ್ನು ಕಿತ್ತು ಹದಮಾಡಿದ ಜಾಗದಲ್ಲಿ ಸಾಲಾಗಿ ಹಚ್ಚಬೇಕು. ನೀರು ಗೊಬ್ಬರ ಸಾಕಷ್ಟು ಪೂರೈಸಬೇಕು. ಮೊದಲಿನ ಎರಡು ವರುಷ ಹೆಚ್ಚು ಕಾಳಜಿ ಮಾಡಬೇಕು. ಬಿಸಿಲು ಚಳಿ ಬಹಳ ಆದರೆ, ಮೇಲೆ ಹುಲ್ಲು, ಎಲೆ, ಚೀಲ ಹೊದಿಸಿ ನೆರಳು ಒದಗಿಸ ಬೇಕು.

ಮುಂದೆ ಗಿಡ ಬೆಳೆದಂತೆ ಪಾತಿ ಅಗಲ ಮಾಡ ಬೇಕು. ಹೆಚ್ಚಾಗಿ ನೀರು ಉಣಿಸಬೇಕು. ನೀರು ಪಾತಿ ಯಲ್ಲಿ ಗಿಡದಿಂದ ಸ್ವಲ್ಪ ದೂರ ಸುತ್ತಲೂ ನಿಲ್ಲುವಂತೆ ಮಾಡುವದು ಒಳ್ಳೇದು. ಯಾಕೆಂದರೆ ಕಾಂಡಕ್ಕೆ ಹೊಂದಿ ನೀರು ಇದ್ದರೆ ಅದು ಕೊಳೆಯಬಹುದು.

ಮಾದ : ಅದೆಲ್ಲ ಆಯಿತು ಸ್ವಾಮಿ. ಗೊಬ್ಬರ ಹಾಕುವದು ಗಿಡ ಬೆಳೆಯಲಿಕ್ಕೋ ಹೆಚ್ಚು ಹಣ್ಣು ಬಿಡುವ ದಕ್ಕೋ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಭೀಮ : ಭಲೆ ಮಾದ! ಒಳ್ಳೆಯ ಪ್ರಶ್ನೆ. ಗಿಡ ಚೆನ್ನಾಗಿ ಬೆಳೆದರೆ ತಾನೆ ಮುಂದೆ ಹೆಚ್ಚು ಫಲ ಕೊಡುವದು ? ಇಷ್ಟು ತಿಳೀಬಾರದೇ ?

ಗ್ರಾಮಸೇವಕ : ನಿಜ, ಅದಿರಲಿ. ಇಲ್ಲಿ ನೋಡಿ ಗೊಬ್ಬರ ಹಾಕುವದನ್ನು ಇನ್ನೊಂದು ಸಾರಿ ಗಿಡ ಹೂ, ಕಾಯಿ ಬಿಡುವದಕ್ಕೆ ಮುಂಚೆ ಮರೆಯಬಾರದು.

ಗೊಬ್ಬರ ಹೆಚ್ಚು ಹಾಕುತ್ತ ಹೋಗಬೇಕು. ಎಂಟು ಹತ್ತು ವರುಷದ ಗಿಡಕ್ಕೆ ೮೦ ಪೌಂಡುಗಳಷ್ಟು ಹಿತ್ತಲ ಗೊಬ್ಬರ, ೧೦ ಪೌಂಡು ಹಿಂಡಿ ಗೊಬ್ಬರ, ೨ ಪೌಂಡು ಸೂಪರ್ ಫಾಸ್ಫೇಟ್ ಬಳಸಬೇಕು. ಹಿಂಡಿಗೊಬ್ಬರ ಗೆದ್ದಲು ಹುಳಗಳಿಗೆ ಕಾರಣವಾಗುತ್ತದೆ ಎನ್ನುತ್ತಾರೆ. ಅದಕ್ಕೆ ಬದಲು ಅಮೋನಿಯಂ ಸಲ್ಫೇಟ್ ಬಳಸುವದು ಒಳ್ಳೆಯದು.

ಕುಶಾಲಪ್ಪ : ಸರಿ ಸ್ವಾಮಿ, ಗಿಡಗಳಿಗೆ ರೋಗವೇನೂ ಬರುವುದಿಲ್ಲವೇ ?

ಗ್ರಾಮಸೇವಕ : ಅದೇಕೆ ? ರೋಗಗಳು ಬರುತ್ತವೆ. ಕಾರಣ ಗಿಡ ಬೆಳೆದಾಗ ಕೃಷಿ ಇಲಾಖೆಯವರು ಹೇಳುವ ಔಷಧಿ ಸಿಂಪಡಿಸಬೇಕು.

ಭೀಮ : ಅದಾಯಿತು ಸ್ವಾಮಿ, ಒಂದು ಗಿಡದಲ್ಲಿ ಎಷ್ಟು ಹಣ್ಣುಗಳು ಆಗಬಹುದು.

ಗ್ರಾಮಸೇವಕ : ಒಂದು ಗಿಡಕ್ಕೆ ಒಂದು-ಒಂದೂವರೆ ಸಾವಿರ ಹಣ್ಣು ಆಗುತ್ತದೆ. ಅದರ ತೂಕ ಸುಮಾರು ೨ ಮಣ ಆಗಬಹುದು.

CC-O. In Public Domain. Digitized by eGangotri

ಭೀಮ : ಹಣ್ಣು ಕೊಯ್ಯುವದು ಯಾವಾಗ ?

ಗ್ರಾಮಸೇವಕ : ಜುಲೈನಿಂದ ಸೆಪ್ಟೆಂಬರ್ ತಿಂಗಳ ವರೆಗೆ ಒಂದು ಸಲ ಫಸಲು ಬರುತ್ತದೆ. ಆಗ ದಪ್ಪವಾಗಿ ಮತ್ತು ಹಳದಿ ಬಣ್ಣಕ್ಕೆ ತಿರುಗುತ್ತಿರುವ ಹಣ್ಣುಗಳನ್ನೆಲ್ಲ ಕೊಯ್ಯಬೇಕು.

ರಂಗಪ್ಪ : ಒಂದು ಎಕರೆ ಹೊಲದಲ್ಲಿ ನಿಂಬೆ ಹಾಕಿದರೆ ಎಷ್ಟು ಲಾಭ ಬರುವದು ?

ಗ್ರಾಮಸೇವಕ: ಸುಮಾರು ಒಂದು ಎಕರೆಯ ನೂರು ಗಿಡಗಳಿಗೆ ಐದಾರು ಸಾವಿರ ರೂಪಾಯಿ ಬರುವದು. ಇದರಲ್ಲಿ ಸುಮಾರು ಮೂರು ಸಾವಿರ ಖರ್ಚು ಬಂದರೆ ಎರಡು ಸಾವಿರ ರೂಪಾಯಿ ಲಾಭ ಬಂದೇಬರುವದು.

ರಂಗಪ್ಪ : ಹಾಗಾದರೆ ನಿಂಬೆ ಹಾಕುವದು ವಾಸಿ ಬಿಡಿ ಬುದ್ಧಿ. ನಿಂಬೆ ಬಡವರ ಬಂಧು ; ಅಂತೆ. ನಿಂಬೆ ಹಣ್ಣಿದ್ದರೆ ವೈದ್ಯರು ಬರಬೇಕಾಗಿಲ್ಲವಂತೆ. ಇದೂ ಅಲ್ಲದೇ ಲಾಭವೂ ಆಗುತ್ತದೆ. ನನಗೆ ಇಂದೇ ಸಸಿಗಳನ್ನು ಕೊಟ್ಟು ಬಿಡಿರಿ. ನೀವು ಬಂದು ಒಮ್ಮೆ ನೋಡಿಹೋಗಿರಿ. ನಾನು ತೋಟ ಹೇಗೆ ಮಾಡುತ್ತೇನೆ. ನಿಂಬೆಯ ವಿಚಾರ ಇಂದು ನನಗೆ ಸರಿಯಾಗಿ ತಿಳಿದಿದೆ.

ಗ್ರಾಮಸೇವಕ : ಅವಶ್ಯ ಬರುತ್ತೇನೆ. ನನ್ನ ಕೆಲಸವೇ ಅದು. ನಿನಗೆ ಏನೇ ಬೇಕಾದರೂ ನನಗೆ ತಿಳಿಸುತ್ತಿರು.

ರಂಗಪ್ಪ : ನಮಸ್ಕಾರ !

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆಗಳು

ನೀವು ಓದಲೇಬೇಕಾದ ಪುಸ್ತಕಗಳು

ಜನಪ್ರಿಯ ವಾಲ್ಮೀಕಿ ರಾಮಾಯಣ

ನಾಗರಿಕತೆಯ ಇತಿಹಾಸ

ಕಥಾಸಂಕಲನ

ಕನ್ನಡ ಪ್ರತಿಭೆ

ಕನ್ನಡ ಪರಂಪರೆ

ನನ್ನೂರು

ನಳಚರಿತ್ರೆ ಸಂಗ್ರಹ

ವಿದ್ಯಾಪೀಠಗಳು

ನಕ್ಷತ್ರ ವೀಕ್ಷಣೆ

ಕರ್ನಾಟಕ ಪರಿಚಯ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತಮಗೆ ಬೇಕಾದಲ್ಲಿ

Sri Vidyabharathi Book Centre, Sringeri